## ವನ್ಯಜೀವಿ ಸಂರಕ್ಷಣೆ ತುರ್ತಾಗಬೇಕಿದೆ

‘ವನ್ಯಜೀವಿ –ಮಾನವ ಕಾಡುವ ಸಂಘರ್ಷ’ (ಮಾ. 19, ಉಮೇಶಭಟ್ಟ ಪಿ.ಎಚ್.) ಮುಖಪುಟ ಲೇಖನ ಪ್ರಸ್ತುತವಾಗಿದೆ. ಬಹಳ ವರ್ಷಗಳಿಂದ ವನ್ಯಜೀವಿ– ಮಾನವ ಸಂಘರ್ಷ ನಡೆಯುತ್ತಲಿದ್ದರೂ ಇತ್ತೀಚಿನ ದಿನಗಳಲ್ಲಿ ತೀವ್ರತೆ ಹೆಚ್ಚಿ ವನ್ಯಜೀವಿಗಳ ದಾಳಿಗೆ ತುತ್ತಾಗುತ್ತಿರುವವರ ಸಂಖ್ಯೆ ಏರುತ್ತಿರುವುದು ಶೋಚನೀಯ. ಕಾಡು ಬಿಟ್ಟು ನಾಡಿಗೆ ಲಗ್ಗೆ ಇಡುತ್ತಿರುವ ಪ್ರಾಣಿಗಳ ಮನಸ್ಥಿತಿ, ಪರಿಸರದಲ್ಲಾಗುತ್ತಿರುವ ಬದಲಾವಣೆ, ಮನುಷ್ಯ ಸೃಷ್ಟಿಸಿದ ಸಮಸ್ಯೆಗಳು, ಎಲ್ಲಾ ಒಂದಾಗಿ ಈ ಸಂಘರ್ಷಕ್ಕೆ ಕಾರಣವಾಗಿದೆ. ಸೂಕ್ತ ಅಂಕಿಅಂಶಗಳೊಂದಿಗೆ ಸಮಸ್ಯೆಗೆ ಲಭ್ಯವಿರುವ ಪರಿಹಾರಗಳನ್ನು ಕೂಡ ಲೇಖಕರು ತಿಳಿಸಿರುವುದು ಉಚಿತವಾಗಿದೆ. ವನ್ಯಜೀವಿ, ಪರಿಸರ ಸಂರಕ್ಷಣೆಗಾಗಿ ವಿಶೇಷ ಯೋಜನೆಗಳನ್ನು ನಮ್ಮ ಸರ್ಕಾರ ತುರ್ತಾಗಿ ರೂಪಿಸಬೇಕಿದೆ.

–ರಾ. ರಾಮಾರಾಧ್ಯ, ಮೈಸೂರು

## ಆಹಾರ ಮೂಲ ಸೃಷ್ಟಿಯಾಗಲಿ

ಮಾನವರು ಮತ್ತು ವನ್ಯಪ್ರಾಣಿಗಳು ಅನುಭವಿಸುತ್ತಿರುವ ಸವಾಲುಗಳನ್ನು ಲೇಖಕರು ವಿವರವಾಗಿ ಚಿತ್ರಿಸಿದ್ದಾರೆ. ಮನುಷ್ಯನ ಬದಲಾದ ಜೀವನ ಮಾರ್ಗಗಳಿಂದ ಸಮಸ್ಯೆಗಳು ಹೆಚ್ಚಾಗಿದ್ದು, ಸರ್ಕಾರ, ಸಂಘ ಸಂಸ್ಥೆಗಳು ಮತ್ತು ನಾಗರೀಕರು ಕಾರ್ಯಪ್ರವೃತ್ತರಾಗಲೇಬೇಕಿದೆ. ಕಾಡುಗಳಲ್ಲಿ ವನ್ಯಪ್ರಾಣಿಗಳಿಗೆ ಬೇಕಿರುವ ಆಹಾರದ ಮೂಲಗಳನ್ನು ಸೃಷ್ಟಿ ಮಾಡಿದಷ್ಟು ಅನುಕೂಲ. ಈ ವಿಚಾರದಲ್ಲಿ ಅರಣ್ಯ ಇಲಾಖೆಯ ಪಾತ್ರ ದೊಡ್ಡದು. ಹಲಸು, ಮಾವು, ಬಿದಿರು, ನೆಲ್ಲಿ, ನೇರಳೆ, ಅತ್ತಿ, ಆಲ, ಗೋಣಿ, ಹುಣಸೆ ಇತ್ಯಾದಿ ಹತ್ತಾರು ಬಗೆಯ ಹಣ್ಣಿನ ಗಿಡಮರಗಳನ್ನು, ಗೆಡ್ಡೆ ಗೆಣಸು, ಬಗೆಬಗೆಯ ಹುಲ್ಲುಗಳನ್ನು ಬೆಳೆಸಿದರೆ




ಕಾಡುಪ್ರಾಣಿಗಳಿಗೆ ಖಂಡಿತವಾಗಿಯೂ ಅನುಕೂಲ.

–ವಿಜಯ್ ಅಂಗಡಿ, ಹಾಸನ

## ಜರ್ಜರಿತವಾಗಿದೆ ಕಾಡು

ಈ ಬರಹ ಹಲವು ವಿಚಾರಗಳನ್ನು ಮುನ್ನೆಲೆಗೆ ತಂದಿದೆ. ಶಿವರಾಮ ಕಾರಂತರ ನಂತರ ಸಮಯದಲ್ಲಿ ಕಾಡು ಹಿರಿದಾಗಿ ಮನುಷ್ಯನ ಜೀವನ ಚಿಕ್ಕದಾಗಿತ್ತು, ತೇಜಸ್ವಿ ಅವರ ಸಮಯದಲ್ಲಿ ಕಾಡು ಕಿರಿದಾಗುತ್ತಾ ಮನುಷ್ಯರ ಜೀವನ ದೊಡ್ಡದಾಗುತ್ತಿತ್ತು. ಈಗ ಮನುಷ್ಯರ ಜೀವನ ಗತಿಯ ವೇಗ ಹೆಚ್ಚಿ ಕಾಡುಗಳು ಅತಿ ಕಡಿಮೆಯಾಗಿ ಎಲ್ಲೆಲ್ಲೂ ನಿವೇಶನಗಳು, ಕಟ್ಟಡಗಳು ತಲೆಯೆತ್ತಿವೆ. ಕೃಷಿ ಭೂಮಿಯು ವಾಣಿಜ್ಯ ಕೆಲಸಗಳಿಗೆ ಬಳಕೆಯಾಗುತ್ತಿದೆ. ಸಾಲದೇ ಕಾಡಿನಂಚಿನ ಊರುಗಳಿಗೆ ಪ್ರವಾಸ ಹೋಗಿ ಅಲ್ಲಿ ಬೇಕಾದಷ್ಟು ಪ್ಲಾಸ್ಟಿಕ್ ತ್ಯಾಜ್ಯಗಳನ್ನು ನಾಗರಿಕರು ಎನಿಸಿಕೊಂಡವರು ಎಸೆದುಬರುತ್ತಾರೆ. ಇದರಿಂದಲೂ ಕಾಡು ಜರ್ಜರಿತವಾಗಿದೆ. ಪರಿಸರ ಎಲ್ಲ ಬಗೆಯ ಜೀವಸಂಕುಲವನ್ನು ಒಳಗೊಂಡಿದೆ. ಮಾನವನ ದಾಹ ಎಲ್ಲೆ ಮೀರಿ ಪ್ರಾಣಿಗಳಿಗೆ ನೆಲೆ ಇಲ್ಲದಂತಾಗಿ ಸಂಘರ್ಷಗಳು, ಸಾವುಗಳ ಜೊತೆ ಅರಣ್ಯ ಸವೆಯುತ್ತಿದೆ. ಕಾಡುಪ್ರಾಣಿಗಳ ಕುರಿತು ಕಳಕಳಿಯಿಂದ ಯೋಚನೆ ಮಾಡಲು ಸಾಧ್ಯವಾಗಿಲ್ಲದಂತಾಗಿದೆ.

–ರೇಶ್ಮಾ ಗುಳೇದಗುಡ್ಡಾಕರ್ ಕೊಟ್ಟೂರು

## ನಗೆಗಡಲಲ್ಲಿ ತೇಲಿಸಿತು

‘ಉಡುಪಿಯ ಕನ್ನಡದ ಪೇಚಿನ ಪ್ರಸಂಗಗಳು’ (ಮಾ. 19, ಪಿ.ಬಿ. ಪ್ರಸನ್ನ) ‘ಮಂದಹಾಸ’ ಲೇಖನ ಚೆನ್ನಾಗಿದೆ. ಬರಹಕ್ಕೆ ಸೂಕ್ತ ಚಿತ್ರವನ್ನು ನೋಡುತ್ತಾ, ಸಣ್ಣ ಪುಟ್ಟ ಪೇಚಿಗೆ ಸಿಲುಕುವ ಪ್ರಸಂಗಗಳನ್ನು ಓದುತ್ತಾ ಓದುತ್ತಾ ನಗು ತಡೆಯಲಾಗಲಿಲ್ಲ! ‘ಕಟ್ಟಿಂಗಿನ ಅಭಿನಯ ಮಾಡಿ ತೋರಿಸಿದ ಮೇಲೆ’, ‘ಓ, ತಲೆ ಕತ್ತರಿಸುವುದಾ?’ ಎಂಬ ಅರ್ಥಪೂರ್ಣ ಉತ್ತರ ನಗೆಗಡಲಿನಲ್ಲಿ ತೇಲಿಸಿತು. ‘ಚೆನ್ನುಡಿ’ ಅಂಕಣದಲ್ಲಿ ಕರ್ನಾಟಕದ ಪ್ರಾದೇಶಿಕ ಭಾಷೆಗಳ ಸೊಗಡನ್ನು ಸವಿದಿದ್ದ ನನಗೆ, ಈ ಬರಹ ರಸದೌತಣ ನೀಡಿತು. 40 ವರ್ಷಗಳ ಹಿಂದೆ ಹುಬ್ಬಳ್ಳಿಯ ನಮ್ಮ ಬ್ಯಾಂಕ್ ಶಾಖೆಯಲ್ಲಿ ಕೆಲಸ ಮಾಡುವಾಗ, ನಾನು ಅನುಭವಿಸಿದ್ದ ಕೆಲವು ಪೇಚಿನ ಪ್ರಸಂಗಗಳ ನೆನಪು, ಮಂದಹಾಸ ತಂದಿತು.

–ಬಿ.ವಿ. ರಾಜಲಕ್ಷ್ಮಿ, ಬೆಂಗಳೂರು



## ಕುತೂಹಲಕರ ತಾಣ

‘ಬೆಟ್ಟದ ಮೇಲೊಂದು ಸೊನೆಯ ತಾಣ’ (ಮಾ. 19, ಆನಂದತೀರ್ಥ ಪ್ಯಾಟಿ) ಲೇಖನದಲ್ಲಿ ಅವರೆಯೊಂದಿಗೆ, ಹೆಬ್ಬೆಟ್ಟವೆಂಬ ತಾಣದ ಮಾಹಿತಿ ಕುತೂಹಲ ಮೂಡಿಸಿತು.

–ಭುವನ ಧನು

## ಜನಸಾಮಾನ್ಯರಿಗೆ ಪರಿಚಯಿಸಲಿ

‘ಜಿಐ ಟ್ಯಾಗ್ ಗರಿಮೆಯ ಶಿರಸಿ ಅಡಿಕೆ’ (ಮಾ. 19, ಪವಿತ್ರಾ ಭಟ್) ‘ಹೆಗ್ಗುರುತು’ ಅಡಿಕೆ ಬೆಳೆಯ ಪ್ರಾಮುಖ್ಯವನ್ನು ಎತ್ತಿ ತೋರಿಸುವಲ್ಲಿ ಯಶಸ್ವಿಯಾಗಿದೆ. ಅದರಂತೆಯೆ ಕರ್ನಾಟಕದ ಇತರೆ ಕೆಲವು ಬೆಳೆ ಮತ್ತು ವಸ್ತುಗಳಿಗೆ ಜಿಐ ಟ್ಯಾಗ್ ಮಾನ್ಯತೆ ಇದೆ. ರಾಜ್ಯ ಸರ್ಕಾರ ಜಾಹೀರಾತು ಮತ್ತು ಪ್ರಾಯೋಜಿತ ಅಂಕಣಗಳ ಮೂಲಕ ಇವುಗಳನ್ನು ಜನಸಾಮಾನ್ಯರಿಗೆ ಪರಿಚಯಿಸಿದರೆ, ನಮ್ಮ ಸುತ್ತಲೂ ಬೆಳೆಯುವ ಮತ್ತು ತಯಾರಿಸಲಾಗುವ ವಸ್ತುಗಳಿಗೆ ಬೆಲೆ ಕೊಡುವಂತಾಗಿ, ನಮ್ಮ ಕುಶಲಕರ್ಮಿಗಳು ಮತ್ತು ರೈತರನ್ನು ಬೆಂಬಲಿಸುವಂತಾಗುತ್ತದೆ.

–ಗುರುರಾಜ ಜೋಶಿ, ಬೆಂಗಳೂರು



## ಬೆಳ್ಳಿ ಹೂಡಿಕೆಗೆ ಮಹತ್ವ

‘ಬೆಳ್ಳಿ ಬೆಲೆ ಗಗನಮುಖಿ ಏಕೆ?’ (ಮಾ. 19, ಗಿರೀಶ್ ಸಿ.ಜಿ.) ‘ಉಳಿಕೆ–ಹೂಡಿಕೆ’ ಅಂಕಣ ಬೆಳ್ಳಿಲೋಹದ ಪ್ರಾಮುಖ್ಯದ ಮೇಲೆ ಬೆಳಕು ಚೆಲ್ಲಿದೆ. ಸದ್ಯದಲ್ಲಿ ಚಿನ್ನದ ಬೆಲೆ ಏರಿಕೆಯಾಗಿರುವುದರಿಂದ ಬೆಳ್ಳಿಯ ಆಭರಣಗಳು, ಆಲಂಕಾರಿಕ ವಸ್ತುಗಳ ಮೇಲೆ ಅವಲಂಬಿತವಾಗಿ, ಬೆಳ್ಳಿಗೆ ಭಾರೀ ಬೇಡಿಕೆ ಬಂದು ಈ ಅಪರೂಪದ ಲೋಹದ ಬೆಲೆ ಏರುಗತಿಯಲ್ಲಿ ಸಾಗುತ್ತಿದೆ ಎನ್ನಬಹುದು. ಅಲ್ಲದೆ ಬೆಳ್ಳಿಯ ವಸ್ತುಗಳು ಪ್ರತಿಷ್ಠೆಯ ವಸ್ತುಗಳಾಗಿಯೂ ಗುರುತಿಸಿಕೊಳ್ಳುತ್ತಿವೆ. ಔಷಧೀಯ ತಯಾರಿಕೆಗಳಲ್ಲೂ, ಸೀರೆ ತಯಾರಿಕೆ ಘಟಕಗಳಲ್ಲೂ, ಮತ್ತಿತರ ಕೈಗಾರಿಕೆಗಳಲ್ಲೂ ಬಳಸುವುದರಿಂದ, ಬಹೂಪಯೋಗಿ ಬೆಳ್ಳಿಗೆ ಭಾರೀ ಬೆಲೆ. ಸುರಕ್ಷಿತ ಹೂಡಿಕೆ ಕೂಡ ಆಗಿರುವುದರಿಂದ ಹೂಡಿಕೆ ಮಾಡಲು ಅಡ್ಡಿ ಇಲ್ಲ ಎನ್ನಬಹುದು.

–ಚಂದ್ರಕುಮಾರ್ ಡಿ., ಬೆಂಗಳೂರು

## ಚಿತ್ತಾಕರ್ಷಕ ಚಿತ್ರ

ಮಾರ್ಚ್ 19ರ ಸಂಚಿಕೆಯ ರಕ್ಷಾಪುಟದಲ್ಲಿ ಅನೂಪ್ ರಾಘ ಟಿ. ಅವರು ಕ್ಲಿಕ್ಕಿಸಿದ, ಗರಿ ಚಾಚಿ ಕುಳಿತಿದ್ದ ನವಿಲಿನ ಚಿತ್ರ ಬಹಳ ಚಿತ್ತಾಕರ್ಷಕವಾಗಿತ್ತು.

–ಕೆ.ಎಂ. ಕೊಟ್ರಸ್ವಾಮಿ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in